**ದಿನಾಂಕ: 17-08-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ.ವಿ.ಎಸ್.ಪಿ. ವಕೀಲರಿಂದ:**

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ. ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನನ್ನ ಪರವಾನಿಗೆ ನಿಶಾನೆಗೊಳಿಸಲು ವಿನಂತಿಸಿಕೊಳ್ಳುತ್ತೇನೆ.

1. ನೋಂದಾಯಿತ ಕ್ರಯ ಪತ್ರ ಸಂ.2046/1989-90 ನೇದ್ದರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.
2. ನೋಂದಾಯಿತ ಕ್ರಯ ಪತ್ರ ಸಂ.482/2000-01 ನೇದ್ದರ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.
3. ನೋಂದಾಯಿತ ಕ್ರಯ ಪತ್ರ ಸಂ.667/1996-97 ನೇದ್ದನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.
4. ಜಮೀನು ಸರ್ವೆ ನಂ.24/8 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು.
6. ಜಮೀನು ಸರ್ವೆ ನಂ.60 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು.
7. ಜಮೀನು ಸರ್ವೆ ನಂ.51 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

8. ಜಮೀನು ಸರ್ವೆ ನಂ.45/2 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**(ಪಾಟೀ ಸವಾಲು: ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ದಾವೆಗೆ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು ಸೂಕ್ತ ಕಾರಣಗಳು ಇಲ್ಲದ್ದರಿಂದ ಅವರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**

**ಪಾಟೀ ಸವಾಲು: ಈ ಹಂತದಲ್ಲಿ 1, 2, 4, 5, 6, 8, 9, 10, 12, 13 ನೇ ಪ್ರತಿವಾದಿಯರು ಏಕತರ್ಫಿ ಇದ್ದು, ಹಾಗೂ ಪ್ರತಿವಾದಿ ನಂ.3, 7 ಮತ್ತು 11 ರವರು ಗೈರು ಹಾಜರಿದ್ದು, ಹಾಗೂ ಪ್ರತಿವಾದ ಪ್ರತವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪ್ರತಿವಾದಿಯವರ ಪರವಾಗಿ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**